Q.P. Sl. No. :

**A**

# ಮೇ/ಜೂನ್ 2024-2025 ರ ಪರೀಕ್ಷೆ-2
# MAY/JUNE 2024-2025 EXAMINATION-2

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12

**CCE RR/PR/PF(A) 501/35022**

[ Total No. of Printed Pages : 12

[ ಒಟ್ಟು ಪ್ರಶ್ನೆಗಳ ಸಂಖ್ಯೆ : 38

[ Total No. of Questions : 38

**ಸಂಕೇತ ಸಂಖ್ಯೆ : 33-K** **Code No. : 33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ)**

**(Regular Repeater / Private Repeater / Private Fresh)**

ದಿನಾಂಕ : 28. 05. 2025 ] [ Date : 28. 05. 2025

ಸಮಯ : ಬೆಳಗ್ಗೆ 10-00 ರಿಂದ ಮಧ್ಯಾಹ್ನ 1-00 ರವರೆಗೆ ] [ Time : 10-00 A.M. to 1-00 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ **ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (*ಬಾಣದ ಗುರುತನ್ನು ಅನುಸರಿಸಿ*).** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಇವೆರಡೂ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.



Cut here/ಇಲ್ಲಿ ಕತ್ತರಿಸಿ

CCE RR/PR/PF

TEAR HERE TO OPEN THE QUESTION PAPER WITH REVERSE JACKET
ಹಿಮ್ಮುಖ ಜಾಕೆಟ್ ಹೊಂದಿರುವ ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here/ಇಲ್ಲಿಂದ ಕತ್ತರಿಸಿ

Tear here/ಇಲ್ಲಿಂದ ಕತ್ತರಿಸಿ

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :** **4 × 1 = 4**

1. 'ದ್ವಿತೀಯ ವಿಭಕ್ತಿ' ಪ್ರತ್ಯಯವಿದು

(ಎ) ಗೆ

(ಬಿ) ಅಲ್ಲಿ

(ಸಿ) ಅನ್ನು

(ಡಿ) ಅ

2. 'ಬನ್ನಿಬನ್ನಿ' – ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ

(ಎ) ನುಡಿಗಟ್ಟು

(ಬಿ) ಅನುಕರಣಾವ್ಯಯ

(ಸಿ) ಜೋಡುನುಡಿ

(ಡಿ) ದ್ವಿರುಕ್ತಿ

CCE RR/PR/PF

3. 'ಗುಣ ಸಂಧಿ'ಗೆ ಉದಾಹರಣೆಯಾಗಿರುವ ಪದ

(ಎ) ಮರವನ್ನು

(ಬಿ) ಮಹೋತ್ಸವ

(ಸಿ) ಮಳೆಗಾಲ

(ಡಿ) ಮಾತಿಲ್ಲ

4. ಆರು ಸಾಲುಗಳಿರುವ ಪದ್ಯ

(ಎ) ಷಟ್ಪದಿ

(ಬಿ) ತ್ರಿಪದಿ

(ಸಿ) ದ್ವಿಪದಿ

(ಡಿ) ಚೌಪದಿ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 12 × 1 = 12**

5. ವಿಷದ ಬಾಣವು ಮರಕ್ಕೆ ಏಕೆ ತಗುಲಿತು ?

6. ಯಾವುದು ಇಲ್ಲದಿದ್ದರೆ ದೇಶದ ಆಟವೇ ನಡೆಯದು ಎಂದು ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಹೇಳುತ್ತಾರೆ ?

7. ರಮೇಶಗೌಡ ಎಂ.ಕೆ.ರವರು ಹೇಳುವಂತೆ ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ ?

8. ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇರುತ್ತದೆ ?

9. ಗಂಗೆಯಲ್ಲಿ ತೇಲುತ್ತಿದ್ದ ನೂರಾರು ದೀಪಗಳು ಹೇಗೆ ಕಾಣುತ್ತಿದ್ದವು ?

10. ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು ?

11. ಸಿದ್ಧಾರ್ಥನು ಕಾಡಿನಿಂದ ನಾಡಿನತ್ತ ಏಕೆ ಹೊರಟನು ?

12. ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೇಗೆ ಸಿಂಗಾರಗೊಳ್ಳುತ್ತಾಳೆ ?

13. ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಸಿ.ಪಿ.ಕೆ. ಅವರು ಹೇಳಿದ್ದಾರೆ ?

CCE RR/PR/PF

14. ಜನಪದರು ತುಂಬಿದ ಕುಣಿಗಲ್ ಕೆರೆ ಹೇಗೆ ಬಾಗಿದೆ ಎಂದು ಹೇಳಿದ್ದಾರೆ ?

15. ಅಕ್ಕಮಹಾದೇವಿಯವರ ಪ್ರಕಾರ ಸಂತೆಯೊಳಗೊಂದು ಮನೆಯ ಮಾಡಿದರೆ ಯಾವುದಕ್ಕೆ ನಾಚಬಾರದು ?

16. ಉತ್ತರನು ನಿಟ್ಟೋಟದಲ್ಲಿ ಓಡಿದ್ದು ಏಕೆ ?

**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **8 × 2 = 16**

17. ನಮ್ಮ ದೇಶದ ರಕ್ಷಣಾಪಡೆ ಏಕೆ ಪ್ರಬಲವಾಗಿರಬೇಕು ?

18. ತಾಯಿ ಸಿದ್ಧಮ್ಮ ಪುಟ್ಟರಾಜರನ್ನು ಏನೆಂದು ಆಶೀರ್ವದಿಸಿದಳು ?

19. ಹರಿದ್ವಾರಕ್ಕೆ ಕಪಿಲಸ್ಥಾನ ಎಂದು ಹೆಸರು ಬರಲು ಕಾರಣವೇನು ?

20. ಗೋಪಾಲನು ಹೂಬನದ ಸೊಗಸನ್ನು ವರ್ಣಿಸಿರುವ ಬಗೆಯನ್ನು ವಿವರಿಸಿ.

21. ಯುಗದ ಆದಿ ತಂದ ಸಂಭ್ರಮವೇನು ?

CCE RR/PR/PF

22. "ಬೊಬ್ಬೆ ಹೊಡೆದಾವೆ ಬಾಳೆಮೀನು." – ಈ ಸಾಲಿನ ಅರ್ಥವನ್ನು ವಿವರಿಸಿ.

23. ಈ ಲೋಕವು ಯಾವ ರೀತಿ ಸಂತೋಷದಾಯಕವಾಗಿದೆ ಎಂದು ಕವಯಿತ್ರಿ ಹೇಳುತ್ತಾರೆ ?

24. ಕವಿಯ ಅಭಿವ್ಯಕ್ತಿಯಲ್ಲಿ ಕನ್ನಡನಾಡಿನ ವಿಸ್ತಾರವೇನು ?

**IV. ಕೆಳಗಿನ ಕವಿ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** **1 × 3 = 3**

25. ಹಾ.ಮಾ. ನಾಯಕ

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ :** **1 × 3 = 3**

26. ವೇಷ ಧರಿಸಿ ಫಲವೇನಯ್ಯ

ವೇಷದಂತಾಚರಣೆ ಇಲ್ಲದನ್ನಕ್ಕ

ವೇದಾಂತವನೋದಿ ಫಲವೇನಯ್ಯ

ಬ್ರಹ್ಮ ತಾನಾಗದನಕ್ಕ

ನಾನಾ ಕೆರೆಯ ತೋಡಿ ಫಲವೇನಯ್ಯ

ಪುಣ್ಯ ತೀರ್ಥಗಳು ಬರದನ್ನಕ್ಕ ಕಪಿಲಸಿದ್ಧ ಮಲ್ಲಿಕಾರ್ಜುನ

CCE RR/PR/PF

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 × 3 = 3**

27. ''ಕೌರವನ ಸೇನೆಯು ಸಾಗರದಂತೆ ವಿಶಾಲವಾಗಿದೆ.''

**VII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : 1 × 3 = 3**

28. ಉಪ್ಪಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ.

**ಅಥವಾ**

ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ.

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 5 × 3 = 15**

29. ''ಏನಾದರೂ ವರವನ್ನು ಕೇಳು ಕೊಡುತ್ತೇನೆ.''

30. ''ಅವಕಾಶ ಮತ್ತು ಅದೃಷ್ಟಕ್ಕೆ ತಮ್ಮ ಸಂತತಿಯ ಉಳಿವನ್ನು ಒಡ್ಡುತ್ತವೆ.''

31. ''ಸಾಧಾರಣವಾದ ಕಪ್ಪುಗಳನ್ನು ಅಲ್ಲಿಯೇ ಬಿಟ್ಟು ಬಂದಿರಿ.''

32. ''ಪ್ರೀತಿಯನ್ನು ಹುಡುಕಿಕೊಂಡು ಜನರ ಕಡೆಗೆ ಬಂದನು.''

33. ''ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು.''

CCE RR/PR/PF

**IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** **1 × 4 = 4**

34. ಕೆಸರೊಳಿದ್ದರು .....

.....

.....

..... ಸಾರ್ಥಕತೆಗೆ

**ಅಥವಾ**

ಒಂದು ಬಾಣಕೆ .....

.....

.....

..... ಹೋರಾಡು ಹಗಲಿರುಳು

**X. ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **1 × 4 = 4**

35. ಅರ್ಜುನ ಮತ್ತು ಉತ್ತರ ಇವರಿಬ್ಬರ ಸಂಭಾಷಣೆಯ ಸ್ವಾರಸ್ಯವನ್ನು ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.

**ಅಥವಾ**

ಅರ್ಜುನ ಮತ್ತು ಉತ್ತರನ ಗುಣಸ್ವಭಾವಗಳಲ್ಲಿ ಕಾಣುವ ವ್ಯತ್ಯಾಸಗಳನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ ಬರೆಯಿರಿ.

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

**1 × 4 = 4 ( 2 + 2 )**

36. ಕನ್ನಡನಾಡಿನ ಮೇಲೆ ಪರಗಡಿಗಳಿಂದ ದಾಳಿ-ದಂಗೆ ನಡೆಯುತ್ತಿದ್ದವು. ವೀರರು ಅವುಗಳನ್ನು ತಡೆದು ಕನ್ನಡಿಗರ ಗೌರವವನ್ನು ಉಳಿಸಿದ್ದಾರೆ. ತ್ಯಾಗ, ಬಲಿದಾನಗಳಿಂದ

CCE RR/PR/PF

ಅಮರರಾಗಿದ್ದಾರೆ. ನಮ್ಮ ಜನಪದರು ಜನತೆಯನ್ನು ಹುರಿದುಂಬಿಸಲು, ಇಂತಹ ವೀರರ ಜೀವನ ಚರಿತ್ರೆಯನ್ನು ಲಾವಣಿ ಕಟ್ಟಿ ಹಾಡಿದ್ದಾರೆ. ಲಾವಣಿಯು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರವಾಗಿದೆ. ಜನಸಾಮಾನ್ಯರು ರಚಿಸಿರುವ ಲಾವಣಿಗಳು ವಸ್ತುನಿಷ್ಠವಾಗಿದ್ದು, ಐತಿಹಾಸಿಕ ಮಹತ್ವವನ್ನು ಹೊಂದಿವೆ. ಇವು ವೀರರ ಸಾಹಸ ಹಾಗೂ ಉಜ್ವಲ ಜೀವನವನ್ನು ವರ್ಣಿಸುವ ಕಥನಾತ್ಮಕ ಕಾವ್ಯಗಳಾಗಿವೆ. ಏಕ ಘಟನೆಯನ್ನಾಧರಿಸಿ ರಚಿಸಿದ ಹಾಡಿನ ರೂಪದ ಕತೆಗಳಾಗಿವೆ. ಇಂತಹ ಹಲವು ಲಕ್ಷಣಗಳನ್ನು ಲಾವಣಿಯು ಹೊಂದಿದೆ. 'ಹಲಗಲಿಯ ಬೇಡರ ಲಾವಣಿ' ಅದಕ್ಕೊಂದು ನೈಜ ಉದಾಹರಣೆಯಾಗಿದೆ.

ಹಲಗಲಿಯು ಬೇಡರ ಊರು. ಇದು ಮುಧೋಳ ಸಂಸ್ಥಾನದಲ್ಲಿದ್ದು, ಇಂದಿನ ಬಾಗಲಕೋಟೆ ಜಿಲ್ಲೆಗೆ ಸೇರಿದೆ. ಅಂದು ಕಲಾದಗಿಯು ಜಿಲ್ಲೆಯ ಸ್ಥಾನ ಹೊಂದಿತ್ತು. ಇಲ್ಲಿಂದ ಉತ್ತರಕ್ಕೆ ಐದಾರು ಕಿಲೋಮೀಟರು ದೂರದಲ್ಲಿ ಹಲಗಲಿ ಇದೆ. 'ಹಲಗಲಿಯ ಬಂಟರ ಹತಾರ ಕದನ' ಎಂಬ ವೀರ ರಸಯುಕ್ತ ಹಾಡುಗಳೇ ಹಲಗಲಿ ಬೇಡರ ಲಾವಣಿಗಳಾಗಿವೆ.

ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ಆಡಳಿತ ಸೂತ್ರ ಹಿಡಿದರು. ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಭಾರತೀಯರ ಮೇಲೆ ಬ್ರಿಟಿಷರು ನಿಶ್ಶಸ್ತ್ರೀಕರಣದ

CCE RR/PR/PF

ಆಜ್ಞೆಯನ್ನು ಹೊರಡಿಸಿದರು. ಈ ಶಾಸನದ ಪ್ರಕಾರ ಸರ್ಕಾರದ ಅನುಮತಿಯಿಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿರಲಿಲ್ಲ ಮತ್ತು ಭಾರತೀಯರೆಲ್ಲರೂ ತಮ್ಮಲ್ಲಿರುವ ಆಯುಧಗಳನ್ನು ಕೂಡಲೇ ಸರ್ಕಾರಕ್ಕೆ ಒಪ್ಪಿಸಬೇಕಿತ್ತು. ಆದರೆ ತಮ್ಮ ಜೀವನಕ್ಕೆ ಆಧಾರವಾಗಿದ್ದ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕೆಂಬ ಆದೇಶವನ್ನು ಹಲಗಲಿಯ ಬೇಡರು ವಿರೋಧಿಸಿದರು. ಇದರಿಂದ ಅಲ್ಲಲ್ಲಿ ಬ್ರಿಟಿಷರ ವಿರುದ್ಧ ದಂಗೆಗಳಾದವು. ಬ್ರಿಟಿಷ್ ಸರ್ಕಾರದ ದೌರ್ಜನ್ಯದ ವಿರುದ್ಧ ಹಲಗಲಿಯ ಬೇಡರು ಕೆಚ್ಚೆದೆಯಿಂದ ಹೋರಾಡಿದ ಬಗೆಯನ್ನು ಜನಪದರು ತಮ್ಮ ಲಾವಣಿಯಲ್ಲಿ ಸ್ವಾರಸ್ಯವಾಗಿ ವರ್ಣಿಸಿದ್ದಾರೆ.

*ಪ್ರಶ್ನೆಗಳು :*

ಅ) ಬ್ರಿಟಿಷರು ಹೊರಡಿಸಿದ ನಿಶ್ಶಸ್ತ್ರೀಕರಣದ ಆಜ್ಞೆ ಏನನ್ನು ಹೇಳುತ್ತದೆ ?

ಆ) ಲಾವಣಿಯ ಲಕ್ಷಣಗಳನ್ನು ತಿಳಿಸಿ.

CCE RR/PR/PF

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ : 1 × 4 = 4**

37. 'ದೂರದರ್ಶನದಿಂದಾಗುವ ಪ್ರಯೋಜನಗಳು'.

**ಅಥವಾ**

'ಮೌಲ್ಯ ಶಿಕ್ಷಣದ ಮಹತ್ವ'.

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :** **1 × 5 = 5**

38. ನಿಮ್ಮನ್ನು ಯಾದಗಿರಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಸಮನ್ವಿತ' ಎಂದು ಭಾವಿಸಿಕೊಂಡು, ನಿಮ್ಮ ಹಳ್ಳಿಯಿಂದ ವ್ಯಾಸಂಗಕ್ಕೆ ಬರುವ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಯಾದಗಿರಿಯಲ್ಲಿ ಒಂದು ಸುಸಜ್ಜಿತ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಮಂಡ್ಯ ಜಿಲ್ಲೆ ಕೆ.ಆರ್. ಪೇಟೆಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಅಲೋಕ್' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಲಿರುವ 'ಶಾಲಾ ವಾರ್ಷಿಕೋತ್ಸವ' ಕಾರ್ಯಕ್ರಮಕ್ಕೆ ಬರುವಂತೆ ಆಹ್ವಾನಿಸಿ ಚಾಮರಾಜನಗರದ ನಿವಾಸಿಯಾದ 'ಅದಿತಿ' ಎಂಬ ಹೆಸರಿನ ತಂಗಿಗೆ ಪತ್ರವನ್ನು ಬರೆಯಿರಿ.

DO NOT WRITE ANYTHING HERE